21-4-2021

ಸರ್ವ ಪಕ್ಷಗಳ ಸಭೆ ನಡೆಸಿರುವುದು ಸರಿಯೇ? । ರಾಜಕೀಯ ವಲಯದಲ್ಲಿ ಪರ, ವಿರೋಧ ಚರ್ಚೆ । ಸರಕಾರವನ್ನು ಬೈಪಾಸ್ ಮಾಡಿದ್ದು ಅಸಾಂವಿಧಾನಿಕ

# ರಾಜ್ಯಪಾಲರ ನಡೆ ಚುನಾಯಿತ ಸರಕಾರ ಕಡೆಗಣನೆ

**ಬೆಂಗಳೂರು:** ರಾಜ್ಯದಲ್ಲಿ ಕೋವಿಡ್ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವ ಬಗ್ಗೆ ರಾಜ್ಯಪಾಲರೇ ಅಧ್ಯಕ್ಷತೆ ವಹಿಸಿ ಸಭೆ ನಡೆಸಿರುವುದರ ಔಚಿತ್ಯ ಪ್ರಶ್ನೆಗೊಳಗಾಗಿದೆ. ಚುನಾಯಿತ ಸರಕಾರ ಇರುವಾಗ ರಾಜಭವನ ಹೀಗೆ ಮಧ್ಯಸ್ಥಿಕೆ ವಹಿಸಿರುವುದಕ್ಕೆ ಟೀಕೆಯೂ ಕೇಳಿ ಬಂದಿದೆ.



ರಾಜ್ಯಪಾಲ ವಿ.ಆರ್.ವಾಲ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಸಿಎಂ ಯಡಿಯೂರಪ್ಪ, ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಸೇರಿ ಎಲ್ಲ ಪಕ್ಷಗಳ ಪ್ರಮುಖರು ಭಾಗಿಯಾಗಿದ್ದರು. ವಿಧಾನಮಂಡಲದ ಉಭಯ ಸದನಗಳ ಅಧ್ಯಕ್ಷರೂ ಪಾಲ್ಗೊಂಡಿದ್ದರು. ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆದ ಈ ಸಭೆಯಲ್ಲಿ ಪಾಲ್ಗೊಳ್ಳುವಂತೆ ರಾಜಭವನದಿಂದಲೇ ಸೂಚನಾ ಪತ್ರ ಕಳುಹಿಸಿ ಕೊಡಲಾಗಿತ್ತು. ಹಾಗಾಗಿ ರಾಜ್ಯದ ಇತಿಹಾಸದಲ್ಲೇ ಇದೊಂದು ಅಪರೂಪದ ಘಟನೆಯಾಗಿ ದಾಖಲಾಗಿದೆ. ಆದರೆ, ಚುನಾಯಿತ ಸರಕಾರವನ್ನೇ ಬೈಪಾಸ್ ಮಾಡುವಂತೆ ರಾಜ್ಯಪಾಲರು ಇಷ್ಟೊಂದು ಮುಂದುವರಿಯ ಬಹುದಾ ಎಂಬ ಜಿಜ್ಞಾಸೆ ಶುರುವಾಗಿದೆ.



ರಾಜ್ಯದಲ್ಲಿ ಈ ಹಿಂದೆಲ್ಲ ರಾಷ್ಟ್ರಪತಿ ಆಳ್ವಿಕೆಯಲ್ಲಿದ್ದಾಗ ರಾಜ್ಯಪಾಲರು ಅಧಿಕಾರ ಚಲಾಯಿಸಿದ್ದಾರೆ. ರಾಮೇಶ್ವರ ಠಾಕೂರ್ ಅವಧಿಯಲ್ಲಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಪ್ರತಿ ವಾರ ಜನತಾದರ್ಶನ ನಡೆಯುತ್ತಿತ್ತು. ಜನರ ಅಹವಾಲು ಸ್ವೀಕರಿಸುತ್ತಿದ್ದರು. ಜತೆಗೆ ಆಡಳಿತಾತ್ಮಕವಾಗಿ ಪ್ರಮುಖ ನೀತಿ ನಿರ್ಧಾರ ಕೈಗೊಳ್ಳುವ ಮೂಲಕ ಸದಾ ಸುದ್ದಿಯಲ್ಲಿ ಇರುತ್ತಿದ್ದರು. ಇನ್ನು ಎಚ್.ಆರ್. ಭಾರದ್ವಾಜ್ ರಾಜ್ಯಪಾಲರಾಗಿದ್ದಾಗ ಅಂದಿನ ಬಿಜೆಪಿ ಸರಕಾರವನ್ನು ಇನ್ನಿಲ್ಲದಂತೆ ಕಾಡಿದ್ದರು. ಅಂಗೀಕರಿಸಿದ ವಿಧೇಯಕ ವಾಪಸ್ ಕಳುಹಿಸಿ ಸ್ಪಷ್ಟೀಕರಣ ಬಯಸುವುದು ಅವರ ಕಾರ್ಯಶೈಲಿಯ ಭಾಗವಾಗಿತ್ತು. ಆದರೆ, ಭಾರದ್ವಾಜ್ ಮತ್ತು ಠಾಕೂರ್‌ರಂತಹ ರಾಜ್ಯಪಾಲರು ಕೂಡ ಯಾವುದೇ ವಿಚಾರದಲ್ಲಿ ಸರ್ವಪಕ್ಷಗಳ ಸಭೆ ನಡೆಸಿರಲಿಲ್ಲ. ತಮ್ಮದೇ ಆದ ಶೈಲಿಯಲ್ಲಿ ಸರಕಾರಕ್ಕೆ ಸಲಹೆ, ಸೂಚನೆ ಕೊಡುತ್ತಿದ್ದರು. ಈ ವಿಷಯದಲ್ಲಿ ಒಂದು ಹೆಜ್ಜೆ ಮುಂದೆ ಹೋಗಿರುವ ವಿ.ಆರ್.ವಾಲ ಸರ್ವಪಕ್ಷಗಳ ಮುಖಂಡರ ಸಭೆ ನಡೆಸಿದ್ದಾರೆ.

**ಬಿಜೆಪಿಯಲ್ಲೂ ಅಸಮಾಧಾನ**

ರಾಜ್ಯಪಾಲರು ಈ ಸಭೆ ಕರೆದಿದ್ದರ ಬಗ್ಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆರಂಭದಲ್ಲೆ ವಿರೋಧಿಸಿದ್ದಾರೆ. ಸಿದ್ದರಾಮಯ್ಯ ಅವರಂತೂ ಈ ಸಭೆಯಲ್ಲೇ ಆಕ್ಷೇಪವೆತ್ತಿದ್ದಾರೆ. ರಾಜ್ಯಪಾಲರು ಹೀಗೆ ಸಭೆ ಕರೆದಿರುವುದು ಅಸಂವಿಧಾನಿಕವೆಂದು ಹೇಳಿದ್ದಾರೆ ಎಂಬ ವರ್ತಮಾನವಿದೆ. ಸರಕಾರದ ಕಡೆಯಿಂದ ಕೆಲ ಸಚಿವ ರಾಜ್ಯಪಾಲರ ನಿಲುವನ್ನು ಸಮರ್ಥಿಸಿಕೊಂಡಿದ್ದಾರೆ. ಆದ ವಾಸ್ತವದಲ್ಲಿ ಆಡಳಿತ ಪಕ್ಷ ಬಿಜೆಪಿಯಲ್ಲೂ ರಾಜ್ಯಪಾಲರ ಸ ಬಗ್ಗೆ ಅಸಮಾಧಾನವಿದೆ. ಈ ಬಗ್ಗೆ ಸಚಿವ ಈಶ್ವ ಬಹಿರಂಗವಾಗಿ ಹೇಳಿಕೊಂಡಿದ್ದಾರೆ. ಜತೆಗೆ ಬಿಜೆಪಿ ಹಲವರಿಗೆ ಈ ಕುರಿತು ನೇರವಾಗಿ ಹೇಳಿಕೊಳ್ಳ ಸಾಧ್ಯವಾಗುತ್ತಿಲ್ಲ ಎಂದು ಹೇಳಲಾಗುತ್ತಿದೆ.

ವಿಕ 21/4/21

## ಸಲಹೆ ನೀಡಲಿ

ರಾಜ್ಯಪಾಲರು ಕಾಲಕಾಲಕ್ಕೆ ಸಲಹೆ, ಸೂಚನೆ ನೀಡಲಿ. ಕೊರೊನಾ ಸಂದರ್ಭದಲ್ಲಿ ರಾಜ್ಯದ ಹಿತದೃಷ್ಟಿಯಿಂದ ಅವರು ಕಾಳಜಿ ವಹಿಸುವುದು ಸರಿಯಾದುದೇ. ಅದಕ್ಕಾಗಿ ಅವರು ಸಚಿವರು, ಮುಖ್ಯ ಕಾರ್ಯದರ್ಶಿ ಅವರನ್ನು ಕರೆಸಿಕೊಂಡು ಸಲಹೆ ನೀಡಲಿ. ಅದಕ್ಕೆ ಅಭ್ಯಂತರವಿಲ್ಲ. ಅದರ ಬದಲು ತಾವೇ ಅಧ್ಯಕ್ಷತೆ ವಹಿಸಿಕೊಂಡು ಸರ್ವಪಕ್ಷದ ಸಭೆ ನಡೆಸುವುದು ಚುನಾಯಿತ ಸರಕಾರಕ್ಕೆ ಅಪಮಾನ ಮಾಡಿದಂತಾಗುತ್ತದೆ. ಈ ವಿಚಾರದಲ್ಲಿ ರಾಜಭವನ ಅತಿ ಉತ್ಸಾಹ ತೋರಿದಂತಾಗಿದೆ ಎಂಬ ಅಭಿಪ್ರಾಯ ಆಡಳಿತ ಪಕ್ಷದ ವಲಯದಲ್ಲಿ ಕೇಳಿ ಬರುತ್ತಿದೆ.

## ಸರಕಾರ ಒಪ್ಪಿದರೆ ಜಾರಿ

ರಾಜ್ಯಪಾಲರು ರಾಜ್ಯದ ಮುಖ್ಯಸ್ಥರು. ಹಾಗಾಗಿ ಇಂತಹ ಸಂಕಷ್ಟದ ಸನ್ನಿವೇಶದಲ್ಲಿ ಅವರು ಸಭೆ ನಡೆಸುವುದು ತಪ್ಪಲ್ಲ. ಆದರೆ, ರಾಜ್ಯಪಾಲರ ಸಭೆಯ ನಿರ್ಣಯ ಜಾರಿಯಾಗ ಬೇಕಾದರೆ ಅದನ್ನು ಸರಕಾರ ಒಪ್ಪಬೇಕು. ಇಲ್ಲದಿದ್ದರೆ ಇದೊಂದು ಸಲಹೆಯಷ್ಟೇ ಆಗಲಿದೆ. ಈ ಸಲಹೆಯನ್ನು ಸಚಿವ ಸಂಪುಟ ಅಥವಾ ಸಂಬಂಧಿಸಿದ ಸಚಿವಾಲಯ ಒಪ್ಪಿದರೆ ಅದು ಜಾರಿಯಾಗುತ್ತದೆ ಎಂದು ಈ ಬಗ್ಗೆ ಕೇಳಿದಾಗ ಮಾಜಿ ಅಡ್ವೊಕೇಟ್ ಜನರಲ್ ಬಿ.ವಿ.ಆಚಾರ್ಯ ಹೇಳಿದ್ದಾರೆ.



ರಾಜ್ಯಪಾಲ ವಿ.ಆರ್.ವಾಲ ಹೀಗೆ ಸಭೆ ನಡೆಸಲು ಪ್ರಧಾನಿ ನರೇಂದ್ರ ಮೋದಿ ನೀಡಿದ ಸೂಚನೆ ಕಾರಣವೆಂದು ಸಮರ್ಥಿಸಿಕೊಳ್ಳಲಾಗುತ್ತಿದೆ. ಕೋವಿಡ್‌ನಂತಹ ಸಾಂಕ್ರಾಮಿಕ ರೋಗ ನಿಯಂತ್ರಣದಲ್ಲಿ ರಾಜಭವನದ ಪಾತ್ರವೂ ಮುಖ್ಯ. ಈ ನಿಟ್ಟಿನಲ್ಲಿ ರಾಜಭವನ ತನ್ನ ಜವಾಬ್ದಾರಿ ನಿರ್ವಹಿಸಬೇಕು ಎಂದು ಪ್ರಧಾನಿ ಸೂಚಿಸಿದ್ದರು. ಇದನ್ನೇ ಅಸ್ತ್ರವಾಗಿ ಹಿಡಿದುಕೊಂಡ ರಾಜಭವನದ ಕಡೆಯಿಂದ ಈ ಸಭೆ ನಡೆಸಲಾಯಿತು ಎನ್ನಲಾಗುತ್ತಿದೆ.